ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಖಂಡ 29 ರಿಂದ 72 ರವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ 29ರಿಂದ 72ರ ವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ``1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕಕ್ಕೆ ತಿದ್ದುಪಡಿಯಾದ ರೂಪದಲ್ಲಿ ಅಂಗೀಕಾರವನ್ನು ನೀಡಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವೆ ಏನೆಂದರೆ ``1997ರ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1.20 ಪಿ.ಎಂ

ಅಧ್ಯಕ್ಷರ ಅಪ್ಪಣೆ ಮೇರೆಗೆ

ಗುಲ್ಬರ್ಗ ಮತ್ತು ಬೀದರ್ ನಲ್ಲಿ ರೈತರುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಬಗ್ಗೆ ನೇಮಿಸಿರುವ ಸಮಿತಿಯ ಅವಧಿಯನ್ನೂ ವಿಸ್ತರಿಸುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಮತ್ತು ಬೀದರ್‌ನಲ್ಲಿ ರೈತರುಗಳ ಆತ್ಮಹತ್ಯೆಯಾಯಿತು ಎಂದು ಸಮಿತಿಯನ್ನು ಮಾಡಿದ್ದೀರಿ. ಆ ಸಮಿತಿಯು ಇನ್ನೂ ಎಕ್ಸಿಸ್ಟೆನ್ಸ್‌ನಲ್ಲಿ ಇದೆಯೋ ಇಲ್ಲವೋ ಎಂಬುದು ಗೊತ್ತಾಗಬೇಕು. ನಮಗೆ ಮೀಟಿಂಗ್ ಕರೆಯಿರಿ ಎಂದು ಹೇಳುತ್ತಾರೆ. ಇಲ್ಲಿ ಟೈಂ ಎಕ್ಸ್‌ಟೆನ್‌ಶನ್ ಆಗಿದೆಯೋ ಇಲ್ಲವೋ ಎಂದು ಗೊತ್ತಾಗುತ್ತಿಲ್ಲ. ದಯವಿಟ್ಟು ತಾವುಗಳು ತಿಳಿಸಬೇಕು.

ಅಧ್ಯಕ್ಷರು : ಆ ಸಮಿತಿಯು ಅಸ್ತಿತ್ವದಲ್ಲಿದೆ. ಅದಕ್ಕೆ ಟೈಂ ಎಕ್ಸ್‌ಟೆನ್‌ಷನ್ ಮಾಡಬೇಕೆಂದು ಅಧ್ಯಕ್ಷರು ನನಗೆ ಬರೆದು ಕಳುಹಿಸಿದ್ದಾರೆ. ನಾನು ಅದನ್ನು ಕನ್ಸಿಡರ್ ಮಾಡುತ್ತಿದ್ದೇನೆ.

ತುಂಗಭದ್ರಾ ನದಿಯಿಂದ ಏತನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ತಿಳಿದಿರುವಂತೆ ನಮ್ಮ ತುಂಗಭದ್ರಾ ನೀರಾವರಿ ಯೋಜನೆ ಸುಮಾರು ಆರು ಲಕ್ಷ ಎಕರೆ ರೈತರಿಗೆ ಅನುಕೂಲ ಮಾಡಿ ಕೊಡತಕ್ಕಂಥ ಯೋಜನೆಯಾಗಿದೆ. ಇದನ್ನು ದಿವಂಗತ ವಿಶ್ವೇಶ್ವರಯ್ಯನವರು ಬಹಳ ಚೆನ್ನಾಗಿ ಕಟ್ಟಿ ಪ್ರೊಟೆಕ್ಟೆಡ್ ಏರಿಯಾ ಎಂದು ಮಾಡಿ, ನೀರು ಕುಡಿಯುವುದಕ್ಕೆ ಮತ್ತು ಅಲ್ಪಸ್ವಲ್ಪ ಕೃಷಿಗೆ ನೀರಾವರಿಯಾಗ ಬೇಕೆಂದು ಮಾಡಿದ್ದರು. ಇದು ಕನ್ನಡ ನಾಡಿನ ಬಹಳ ಹಳೆಯ ನೀರಾವರಿ ಯೋಜನೆಯಾಗಿದೆ. ಇವೊತ್ತಿನ ವರೆಗೆ ಈ ನೀರಾವರಿ ಯೋಜನೆಗೆ ಯಾವುದೇ ತರಹದ ಮಾದರಿಕ ಯೋಜನೆಗಳನ್ನು ಮತ್ತು ಮಾಡರ್‌ನೈಸೇಶನ್ ಯೋಜನೆಗಳನ್ನು ಸರಕಾರ ಮಾಡಿಲ್ಲ. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಬಳ್ಳಾರಿ ಮತ್ತು ಶಿರಗುಪ್ಪ ತಾಲ್ಲೂಕುಗಳಲ್ಲಿ ಹೆಚ್ಚಿನ ಭಾಗಗಳು ಈ ನೀರಾವರಿಯನ್ನು ಪಡೆದಿದೆ. ಈ ಬಗ್ಗೆ ನಾವು ಸರಕಾರಕ್ಕೆ ಬಹಳ ಒತ್ತಡವನ್ನು ತಂದಿದ್ದೇವೆ. ಇದರ ಬಗ್ಗೆ ಮಾನ್ಯ ಸಚಿವರು ಕೂಡ ಗಡಿಬಿಡಿಯಲ್ಲಿ ಒಂದು ದಿನ ಬಂದರು. ಆದರೂ ಕೂಡ ಕಳೆದ ಮೂರು ವರ್ಷಗಳಿಂದಲೂ ಈ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಇವೊತ್ತು ಬಹಳಷ್ಟು ನೀರು ಆಂಧ್ರಪ್ರದೇಶಕ್ಕೆ ಹೆಚ್ಚಾಗಿ ಹೋಗುತ್ತಿದೆ. ಇವೊತ್ತು ಸಬ್‌ಕೆನಾಲ್ಸ್, ಮೆಯಿನ್ ಕೆನಾಲ್ಸ್, ಗಳಲ್ಲಿ ಸಿಲ್ಟ್ ತೆಗೆದಿಲ್ಲ, ಲೈನಿಂಗ್ ಮಾಡಿಸಿಲ್ಲ. ಹೀಗಾಗಿ ಸೀಪೇಜ್ ಆಗಿ ನೀರು ಸರಿಯಾಗಿ ಡಿಸ್‌ಚಾರ್ಜ್ ಆಗುತ್ತಾ ಇಲ್ಲ. ಡಿಸ್‌ಚಾರ್ಜ್ ಕಡಿಮೆ ಆಗಿರುವುದರಿಂದ ಟೇಲ್ ಎಂಡ್ ನಲ್ಲಿರುವ ನಮಗೆ ನೀರು ಮುಟ್ಟಾತ್ತಾ ಇಲ್ಲ. ಇವೊತ್ತು ಕೊನೆಯ ರೈತರಿಗೆ ನೀರು ತಲುಪಲು ಒಂದು ತಿಂಗಳು ಬೇಕಾಗುತ್ತದೆ. ಮೊದಲನೇ ಭಾಗದಲ್ಲಿರುವಂತಹ ರೈತರು ತಿಂಗಳಿಗೆ ಎರಡು ಮೂರು ಸಾರಿ ನೀರು ತೆಗೆದುಕೊಂಡರೆ ಕೊನೆಯಲ್ಲಿ ಇರುವ ರೈತರಿಗೆ ನೀರು ಮುಟ್ಟಲು ಒಂದು ತಿಂಗಳು ಬೇಕಾಗುತ್ತದೆ. ಇದರಿಂದಾಗಿ ಕೊನೆಯಲ್ಲಿರುವ 25 ಪರ್ಸೆಂಟ್‌ನಷ್ಟು ರೈತರಿಗೆ ನೀರು ಸಿಗುತ್ತಾ ಇಲ್ಲ. ಇದಕ್ಕೆ ಲೈನಿಂಗ್ ತಾವು ಮಾಡಿಲ್ಲ, ವಿಶೇಷತಃ ಹೆಚ್ ಎಲ್ ಸಿ ಹೈಲೆವೆಲ್ ಕೆನಾಲ್ ರೈಟ್ ಸೈಡ್ ಮತ್ತು ಎಲ್ ಎಲ್ ಸಿ ರೈಟ್ ಸೈಡ್ ಇದೆ. ಇವುಗಳಿಗೆ ಯಾವ ತರಹದ ಯೋಜನೆಗಳೂ ಆಗಿಲ್ಲ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇಲ್ಲಿ ಬಹಳಷ್ಟು ಪಿಕ್ಸ್‌ಅಪ್ಸ್ ಆಗಿದ್ದಾವೆ. ಏತನೀರಾವರಿ ಯೋಜನೆಗಳು ಇದ್ದಾವೆ. ಇದರ ಬಗ್ಗೆ ಸರಕಾರವು ಏನೂ ಮಾಡುತ್ತಾ ಇಲ್ಲ. ನಮ್ಮಲ್ಲಿ ಹಗರಿ ನದಿ ಎಂದು ಇದೆ. ಈ ನದಿಯಿಂದ ಮತ್ತು ತುಂಗಭದ್ರಾ ನದಿಯಿಂದ ಹರಿದು ಹೋಗತಕ್ಕ ನೀರು ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಇಲ್ಲಿ ಒಂದು ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಿ ಎಂದು ಸುಮಾರು ನಾಲ್ಕು ವರ್ಷಗಳಿಂದ ಸರಕಾರವನ್ನು ಕೇಳುತ್ತಿದ್ದೇನೆ. ಅದರ ಬಗ್ಗೆ ಸರಕಾರದವರು ಮಲತಾಯಿ ಧೋರಣೆಯನ್ನು ಯಾಕೆ ತೋರಿಸುತ್ತಿದ್ದಾರೆ